ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,
ಪೊನ್ನಂಪೇಟೆ.

ಸಿ.ಸಿ. ನಂ. **993/2020** ಪ್ರಾ.ಸಾ **–5**
ಚಾ.ಸಾ **– 8**

ದಿನಾಂಕಃ **23.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ರಂಜಿತ ಎಂ ಎಸ್ |
| ತಂದೆಯ ಹೆಸರು | : | ಲೇಟ್ ಸೋಮ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಮುಖ್ಯಪೇದೆ |
| ವಾಸ ಸ್ಥಳ | : | ನಾಪೋಕ್ಲು ಪೊ.ಠಾಣೆ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು 2019 ರಿಂದ 2025 ರ ತನಕ ಕುಟ್ಟ ಪೊ.ಠಾಣೆಯಲ್ಲಿ ಮುಖ್ಯಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 04.07.2020 ರಂದು ನಾನು ಕುಟ್ಟ ಪೊ. ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ತನಿಖಾಧಿಕಾರಿಯವರ ಆದೇಶದಂತೆ ಕೃತ್ಯ ಸ್ಥಳ ಹಾಗೂ ಅಮಾನತು ಮಹಜರ್ ವೇಳೆ ನನ್ನ ಮೊಬೈಲ್ ಫೋನ್ ನಲ್ಲಿ ಭಾವಚಿತ್ರಗಳನ್ನು ತೆಗೆದು ಪ್ರಿಂಟ್ ಹಾಕಿಸಿ ಸಿ ಡಿ ಮಾಡಿ ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ ಹಾಗೂ 65 ಬಿ ವಿದ್ಯುನ್ಮಾನ ಸಾಕ್ಷ್ಯ ಪ್ರಮಾಣ ಪತ್ರ ನೀಡಿರುತ್ತೇನೆ.

ಸಾಕ್ಷಿಯು ನಿ ಪಿ 6 ರಿಂದ 8 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿ ಪಿ 3 ರಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿ ಪಿ 3(ಬಿ) ಎಂದು ಗುರುತಿಸಲಾಯಿತು.

**C.C. No. 993/2020** **PW - 5**

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಸಿ. ಪಿ. ವಕೀಲರಿಂದಃ</u>

ಫೋಟೋದಲ್ಲಿ ನ್ಯಾಯಾಲಯದ ಮುಂದೆ ಇರುವ ಮು. ಮಾ 2 ಸರಿಯಾಗಿ ಕಾಣುತ್ತಿಲ್ಲ. ಫೋಟೋದಲ್ಲಿ 3 ಬಾಕ್ಸ್ ಇದ್ದು ನ್ಯಾಯಾಲಯದಲ್ಲಿ ಒಂದೇ ಮು ಮಾ 2 ಇದೆ ಎಂದರೆ ಸರಿ. ಫೋಟೋ ನೋಡಿದರೆ ಬಾಕ್ಸ್ ಒಳಗಡೆ ಏನು ಇದೆ ಕಾಣುವುದಿಲ್ಲ ಎಂದರೆ ಸರಿ. ಫೋಟೋಗಳು ಮತ್ತು ನಿ ಪಿ 3 ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರ್ ಮಾಡದ ಕಾರಣ ಅದರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಸಾಕ್ಷ್ಯಕ್ಕೂ, ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹಿರಿಯ ಅಧಿಕಾರಿಗಳಿಗೆ ಸಹಾಯ ಮಾಡಲು, ಅಂಕಿ ಅಂಶಗಳಿಗೋಸ್ಕರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಡಗಿನಲ್ಲಿ ಅಮಾನತ ಆದ ಸಮಯದಲ್ಲಿ ಕೋವಿಡ್ ಇದ್ದ ಕಾರಣ ಮದ್ಯ ಮಾರಾಟ ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ <u>ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ